ಜನವರಿ 22, 2014

**2005ಕ್ಕೂ ಮುಂಚಿತವಾಗಿ ನೀಡಲಾದ ಬ್ಯಾಂಕು ನೋಟುಗಳನ್ನು ಹಿಂತೆಗೆದುಕೊಳ್ಳಲಾಗುವುದು - ಭಾರತೀಯ ರಿಸರ್ವ್ ಬ್ಯಾಂಕಿನ ಸೂಚನೆ**

2005ಕ್ಕೂ ಮುಂಚಿತವಾಗಿ ನೀಡಲಾಗಿರುವ ಎಲ್ಲಾ ಬ್ಯಾಂಕು ನೋಟುಗಳನ್ನು ಮಾರ್ಚ್ 31, 2014ರ ನಂತರ ಚಲಾವಣೆಯಿಂದ ಹಿಂತೆಗುದುಕೊಳ್ಳಲಾಗುವುದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಇಂದು ಸೂಚನೆ ನೀಡಿದೆ. ಏಪ್ರಿಲ್ 1, 2014 ರಿಂದ ಈ ನೋಟುಗಳನ್ನು ಬದಲಾಯಿಸಿಕೊಳ್ಳಲು ಬ್ಯಾಂಕುಗಳನ್ನು ಸಂಪರ್ಕಿಸಬೇಕು. ಈ ನೋಟುಗಳ ಬದಲಾವಣೆ ಸೌಲಭ್ಯವನ್ನು ಮುಂದೆ ಸೂಚನೆ ನೀಡುವವರೆಗೂ ಬ್ಯಾಂಕುಗಳು ಮುಂದುವರಿಸಲಿವೆ. ಇಂತಹ ನೋಟುಗಳ ಹಿಂಭಾಗದಲ್ಲಿ ನೋಟು ಮುದ್ರಣ ವರ್ಷವನ್ನು ಮುದ್ರಿಸಿಲ್ಲವಾದ್ದರಿಂದ ಈ ನೋಟುಗಳನ್ನು ಗುರುತಿಸುವುದು ಸುಲಭವೆಂದು ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. (ಕೆಳಗಿನ ಚಿತ್ರವನ್ನು ನೋಡಿ)

2005ಕ್ಕೂ ಮುಂಚಿತವಾಗಿ ನೀಡಲಾದ ನೋಟುಗಳು ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟಪಡಿಸಿದೆ. ಎಂದರೆ, ಬ್ಯಾಂಕುಗಳು ತಮ್ಮ ಗ್ರಾಹಕರಿಗೆ ಮತ್ತು ಗ್ರಾಹಕರಲ್ಲದವರಿಗೂ ಸಹಾ ಈ ನೋಟುಗಳನ್ನು ಬದಲಾಯಿಸಿಕೊಡಬೇಕು. ಆದಾಗ್ಯೂ ಜುಲೈ 01, 2014 ರಿಂದ ಗ್ರಾಹಕರಲ್ಲದವರು 500ರೂ ಮತ್ತು 1000ರೂ ಮುಖ ಬೆಲೆಯ ನೋಟುಗಳನ್ನು ಬದಲಾಯಿಸಿಕೊಳ್ಳಬೇಕಾದರೆ, ತಮ್ಮ ಗುರುತು ಮತ್ತು ವಿಳಾಸದ ಸಾಕ್ಷ್ಯಾಧಾರವನ್ನು, ಈ ನೋಟುಗಳನ್ನು ಬದಲಾಯಿಸಿಕೊಳ್ಳಬಯಸುವ ಬ್ಯಾಂಕು ಶಾಖೆಯಲ್ಲಿ ನೀಡಬೇಕು.

ಸಾರ್ವಜನಿಕರು ಆತಂಕ ಪಡಬಾರದೆಂದು ಭಾರತೀಯ ರಿಸರ್ವ್ ಬ್ಯಾಂಕ್ ಮನವಿ ಮಾಡಿದೆ. ಈ ಹಿಂತೆಗೆತ ಪ್ರಕ್ರಿಯೆಗೆ ಸಕ್ರಿಯ ಸಹಕಾರ ನೀಡಬೇಕಾಗಿಯೂ ಸಹ ಕೋರಿದೆ.

ಅಜಿತ್ ಪ್ರಸಾದ್
ಸಹಾಯಕ ಮಹಾ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ: 2013-2014/1472

## ಉದಾಹರಣೆ




ಚಿತ್ರ-1 ಮುದ್ರಣ ವರ್ಷವನ್ನು ಮುದ್ರಿಸಿಲ್ಲ- ಇಂತಹ ನೋಟುಗಳನ್ನು <u>ಮಾರ್ಚ್ 31, 2014ರ ನಂತರ ಹಿಂತೆಗುದುಕೊಳ್ಳಲಾಗುವುದು</u>




ಚಿತ್ರ-2 ಮುದ್ರಣ ವರ್ಷವನ್ನು ಮುದ್ರಿಸಿದೆ- ಆದ್ದರಿಂದ ಇಂತಹ ನೋಟುಗಳನ್ನು <u>ಹಿಂತೆಗೆದುಕೊಳ್ಳುವುದಿಲ್ಲ</u>